CW.2 PW.2

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.608/2019

| | |
|---|---|
| ಸಾಕ್ಷಿದಾರರ ಹೆಸರು | ಚಿಕ್ಕೀರೇಗೌಡ |
| ತಂದೆಯ ಹೆಸರು | ಕೆಂಪೇಗೌಡ |
| ವಯಸ್ಸು | 70 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ತಗಡೇಗೌಡನದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 26.02.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರನ್ನು ನೋಡಿರುತ್ತೇನೆ. ಅವರು ನಮ್ಮ ಪಕ್ಕದ ಜಮೀನಿನವರು. ಈ ದಿನ 5, 7 ಮತ್ತು 8ನೇ ಆರೋಪಿತರು ಗೈರು ಹಾಜರಿದ್ದು ಅವರನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಉಳಿದ ಆರೋಪಿತರನ್ನು ಸಾಕ್ಷಿಯು ಗುರುತಿಸುತ್ತಾರೆ. ಚಾಸಾ-1 ನನ್ನ ಮಗ, ಚಾಸಾ-3 ನನ್ನ ಸೊಸೆ, ಚಾಸಾ-4 ನನ್ನ ಹೆಂಡತಿ, ಚಾಸಾ-5 ಮತ್ತು 6 ರವರ ಪರಿಚಯ ಇರುತ್ತದೆ.

ದಿಃ16.07.2018 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ನಮ್ಮ ಜಮೀನಾದ ಸರ್ವೆ ನಂ.85/4 ರಲ್ಲಿ ನಾವು ಅಂದರೆ ಚಾಸಾ-1, 3 ಮತ್ತು 4 ರವರು ಕೆಲಸ ಮಾಡುತ್ತಿದ್ದಾಗ ಆರೋಪಿತರು ನಮ್ಮ ಜಮೀನಿನ ಬಳಿ ಬಂದು ಉಳುಮೆ ಮಾಡಿಸಲು ಶುರು ಮಾಡಿದರು. ಯಾಕೆ ಈ ರೀತಿ ನಮ್ಮ ಜಮೀನಿಗೆ ಬಂದಿದ್ದೀರಿ ಎಂದು ಪ್ರಶ್ನೆ ಮಾಡಿದ್ದಕ್ಕೆ ಎಲ್ಲಾ ಆರೋಪಿತರು ಸೇರಿಕೊಂಡು ನನಗೆ ಕೆಟ್ಟ

ಭಾಷೆಯಲ್ಲಿ ಬೈದರು. ಚಪ್ಪಲಿ ಕಾಲುಗಳಿಂದ ಒದ್ದು ಸಣ್ಣಪುಟ್ಟ ಗಾಯಗಳು ಮಾಡಿದರು. ಎರಡು ದೊಣ್ಣೆಗಳನ್ನು ಸಹ ತಂದು ನಮ್ಮಗಳನ್ನು ಹೊಡೆದಿರುತ್ತಾರೆ. ಆಗ ನನ್ನ ಸೊಸೆ ಹಾಗೂ ಹೆಂಡತಿ ಸ್ಥಳಕ್ಕೆ ಬಂದು ಜಗಳ ಬಿಡಿಸಿದರು. ನಂತರ ಸಂಜೆ ನಾವು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಾನು ಈ ಸಂಬಂಧ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ಆ ದಿನ ಆರೋಪಿತರು ಚಾಸಾ-1 ರವರಿಗೆ ಹೊಡೆಯುತ್ತಿದ್ದ ಸಂದರ್ಭದಲ್ಲಿ ನಾನು ಹಾಗೂ ಚಾಸಾ-3 ಮತ್ತು 4 ರವರು ಅದನ್ನು ತಡೆಯಲು ಹೋದಾಗ ನಮ್ಮನ್ನು ಕೂಡ ಹೊಡೆದಿರುತ್ತಾರೆಂದರೆ ಸರಿ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಯಾವುದು ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ದಾಖಲೆಯಾದ ಸ್ಥಳ ಪಂಚನಾಮೆಯನ್ನು ಈಗ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ04.08.2018 ರಂದು ಚಾಸಾ-1 ರವರು ದೂರನ್ನು ಕೊಟ್ಟಿದ್ದಾರೆಂದರೆ ಸರಿ. ದಿಃ15.08.2018 ರಂದು ಪೋಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 8 ಗಂಟೆಯಿಂದ 8.30 ಗಂಟೆಯವರೆಗೂ ಸ್ಥಳ ಮಹಜರ್ ಮಾಡಿರುತ್ತಾರೆಂದರೆ ಸರಿ. ನಾನೇ ಸದರಿ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇನೆಂದರೆ ಸರಿ. ಅದೇ ರೀತಿ ಸದರಿ ಪಂಚನಾಮೆಗೆ ಚಾಸಾ-5 ಮತ್ತು 6 ರವರನ್ನು ಪಂಚರನ್ನಾಗಿ ಪೋಲೀಸರು ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪೋಲೀಸರು ನಾನು ತೋರಿಸಿದ 2 ದೊಣ್ಣೆಗಳನ್ನು ಅಮಾನತು ಪಡಿಸಿಕೊಂಡಿದ್ದರು ಎಂದರೆ ಸರಿ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ 2 ದೊಣ್ಣೆಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ನಮಗೂ ಆರೋಪಿತರಿಗೂ ದಾರಿ ವಿಚಾರದ ಸಂಬಂಧ ಆಗಿ ಬರುವುದಿಲ್ಲ ಎಂದರೆ ಸರಿ. ನಮ್ಮ ಹಾಗೂ ಆರೋಪಿತರ ಜಮೀನುಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ನಮ್ಮ ಜಮೀನಿನ ಸರ್ವೆ ನಂ.85/4 ಎಂದರೆ ಸರಿ. ಆರೋಪಿತರ ಜಮೀನಿನ ಸರ್ವೆ ನಂ.82 ಆಗಿರುತ್ತದೆಂದರೆ ಸರಿ. ನಮ್ಮ ಹಾಗೂ ಆರೋಪಿತರ ಜಮೀನಿನ ಮಧ್ಯೆ ಒಂದು ತೆವರಿ ಅಡ್ಡ ಇರುತ್ತದೆಂದರೆ ಸರಿ. ನಮ್ಮ ಜಮೀನಿನಿಂದ ತಗಡೇಗೌಡನದೊಡ್ಡಿ ಗ್ರಾಮದವರೆಗೂ ಓಡಾಡಲು ನಕಾಶೆ ದಾರಿ ಇದೆ ಎಂದರೆ ಸರಿಯಲ್ಲ. ಆರೋಪಿತರ ಜಮೀನಿನಲ್ಲಿ ಓಡಾಡಲು ಯಾವುದೇ ನಕಾಶ ದಾರಿ ಇರುವುದಿಲ್ಲ ಎಂದರೆ ಸರಿ. ನಮ್ಮ ಜಮೀನಿಗೆ ಹೋಗಲು ಆರೋಪಿತರ ಜಮೀನಿನಲ್ಲಿ ದಾರಿ ಮಾಡುವ ಹಾಗೂ ದಾರಿ ಬಿಡಿಸಿಕೊಳ್ಳುವ ದುರುದ್ದೇಶದಿಂದ ಆರೋಪಿತರ ವಿರುದ್ಧ ಆಗಾಗ ತೊಂದರೆ ಮಾಡುತ್ತಿರುತ್ತೇವೆಂದರೆ ಸರಿಯಲ್ಲ.

ದಿಃ16.07.2018 ರಲ್ಲಿ 11.30 ಗಂಟೆ ಸಮಯದಲ್ಲಿ ಗಲಾಟೆಯಾಯಿತು. ಗಲಾಟೆಯಾದಾಗ ನಾನು ನಮ್ಮ ಜಮೀನಿನ ಬಳಿ ಇದ್ದೆ. ಆರೋಪಿತರು ಅವರ ಜಮೀನಿನಲ್ಲೇ ಇದ್ದರು. ನಾವು ನಮ್ಮ ಜಮೀನಿನಲ್ಲಿ 4 ಜನ ಇದ್ದೇವು. ಆರೋಪಿತರು ನಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು. ಟ್ರಾಕ್ಟರ್ ಮೂಲಕ ಉಳುಮೆ ಮಾಡುತ್ತಿದ್ದರು. ಸದರಿ ಟ್ರಾಕ್ಟರ್ ನ ಸಂಖ್ಯೆ ಗೊತ್ತಿಲ್ಲ. ಟ್ರಾಕ್ಟರ್ ಯಾರಿಗೆ ಸೇರಿದ್ದು ಹಾಗೂ ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಆತ ಬೇರೆ ಊರಿನವರು ಆಗಿರುತ್ತಾರೆಂದು ನುಡಿಯುತ್ತಾರೆ. ಆರೋಪಿತರು ಯಾವತ್ತಿಗೂ ಟ್ರಾಕ್ಟರ್ ತೆಗೆದುಕೊಂಡು ಬಂದು ನಮ್ಮ ಜಮೀನಿನಲ್ಲಿ ಉಳುಮೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೊಪಿತರನ್ನು ಮೊದಲಿಗೆ ನನ್ನ ಮಗನಾದ

ಚಾಸಾ-1 ರವರು ಪ್ರಶ್ನೆ ಮಾಡಿದಾಗ ಅವರು ಜಗಳ ಮಾಡಿದರು. ಆ ಸಮಯದಲ್ಲಿ ನಾನು ಕೇಳಲು ಹೋದಾಗ ನನಗೂ ಕೂಡ ಅವಾಚ್ಯ ಶಬ್ದಗಳಿಂದ ಬೈದು ಚಪ್ಪಲಿ ಕಾಲಿಂದ ಒದ್ದರು.

ದೊಣ್ಣೆಯಲ್ಲಿ 4 ಮತ್ತು 6 ನೇ ಆರೋಪಿ ಹೊಡೆದಿದ್ದು ನಂತರ ಅವರ ಕೈಯಿಂದ ದೊಣ್ಣೆಯನ್ನು ತೆಗೆದುಕೊಂಡು 1 ಮತ್ತು 2ನೇ ಆರೋಪಿತರು ಹೊಡೆದರು. 2ನೇ ಆರೋಪಿ ನನ್ನ ತಲೆ, ಎರಡೂ ಭುಜಗಳ ಹಾಗೂ ಕೈಗಳ ಮೇಲೆ ಹೊಡೆದಿದ್ದು, 1ನೇ ಆರೋಪಿ ನನ್ನ ಬೆನ್ನಿಗೆ ಹೊಡೆದಿರುತ್ತಾರೆ. 3ನೇ ಆರೋಪಿಯು ಸಹ ನನ್ನ ಬೆನ್ನಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. 5ನೇ ಆರೋಪಿ ಹೊಡೆದಿರುವುದಿಲ್ಲ. 6ನೇ ಆರೋಪಿ ಕೈಗಳಿಂದ ನನ್ನ ಸೊಂಟಕ್ಕೆ ಹೊಡೆದಿರುತ್ತಾರೆ. 7ರಿಂದ 9ನೇ ಆರೋಪಿತರು ಕೆಟ್ಟ ಭಾಷೆಯಲ್ಲಿ ಬೈದಿರುತ್ತಾರೆ. ಆರೋಪಿತರು ನಾನು ಹೇಳಿದಂತೆ ಸದರಿ ದಿನ ಸದರಿ ಸ್ಥಳದಲ್ಲಿ ಹಾಗೂ ಸದರಿ ಸ್ಥಳದಲ್ಲಿ ನನ್ನ ಹಾಗೂ ಚಾಸಾ-1, 3 ಮತ್ತು 4 ರವರ ಮೇಲೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹಾಗೂ ದೊಣ್ಣೆಗಳಿಂದ ಹೊಡೆದು ಅದೇ ರೀತಿ ಚಪ್ಪಲಿ ಕಾಲಿಂದ ಒದ್ದು ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅದೇ ದಿನ ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಸಂಜೆ 5 ಗಂಟೆ ಸಮಯದಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹಾಗೂ ಚಾಸಾ-1 ಇಬ್ಬರು ಚಿಕಿತ್ಸೆ ಪಡೆದಿರುತ್ತೇವೆ. ಆರೋಪಿತರು ನನಗೆ ಯಾವುದೇ ರೀತಿ ಹೊಡೆದು ಗಾಯ ಪಡಿಸಿರುವುದಿಲ್ಲ ನಾನು ಈ ಸಂಬಂಧ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-7 ರವರ ಜೊತೆ ಶಾಮೀಲಾಗಿ ಒಂದು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಸಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರವರು ತಾನು ಹೇಳಿ ದೂರನ್ನು ಯಾರೋ ಒಬ್ಬರ ಕೈಲಿ ಬರೆಸಿರುತ್ತಾನೆ. ಪಂಚಾಯತಿ ನಂತರ ತಡವಾಗಿ ದೂರನ್ನು ದಿ04.08.2018 ರಂದು ಅಂದರೆ 18 ದಿನಗಳ ನಂತರ ಕೊಟ್ಟಿರುತ್ತೇವೆ. ದೂರಿನಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ.

CW.2 PW.2

ಪೋಲೀಸರು ಸ್ಥಳಕ್ಕೆ ದಿಃ16.04.2018 ರಲ್ಲಿ ಬಂದಿದ್ದರು. ಸ್ಥಳದಲ್ಲಿ ಬರೆದರು. ವಿಚಾರಣೆ ಮಾಡಿದರು. ಪೋಲಿಸರು ಏನು ಬರೆದುಕೊಂಡಿರುತ್ತಾರೆಂದು ನನಗೆ ಹೇಳಲಾಗುವುದಿಲ್ಲ. ನನ್ನ ಜೊತೆ ಸದರಿ ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆಂದು ಗೊತ್ತಿರುವುದಿಲ್ಲ. ದೊಣ್ಣೆಗಳು ಸ್ಥಳದಲ್ಲೇ ಇದ್ದು ಅದನ್ನು ತೆಗೆದು ನಾನು ಪೋಲೀಸರಿಗೆ ಕೊಟ್ಟಿರುತ್ತೇನೆ. ಸದರಿ ಮು.ಮ-1 ಮತ್ತು 2 ಹೊಸ ಮರದ ದೊಣ್ಣೆಗಳಾಗಿರುತ್ತವೆ ಅವು ಹಳೆಯದಲ್ಲ ಎಂದರೆ ಸರಿ . ಅವುಗಳು ಸುಮಾರು 3 ರಿಂದ 5 ಅಡಿ ಇರುತ್ತವೆ. ಅದು ಹೊಸದೋ ಹಳೆಯದೋ ನನಗೆ ಗೊತ್ತಿಲ್ಲ. ಪೋಲೀಸರು ಯಾವುದನ್ನು ತೆಗೆದುಕೊಂಡು ಬಂದರೋ ನನಗೇನು ಗೊತ್ತು ಎಂದು ಸಾಕ್ಷಿ ನುಡಿಯುತ್ತಾರೆ.

ಪೋಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸ್ಥಳದಲ್ಲಿ ದೊಣ್ಣೆಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ದೊಣ್ಣೆಗಳನ್ನು ನಾನೇ ಪೋಲೀಸರಿಗೆ ಠಾಣೆಯಲ್ಲಿ ನೀಡಿದ್ದು ಅದೇ ರೀತಿ ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಕೇವಲ ಆರೋಪಿತರ ಜಮೀನಿನಲ್ಲಿ ದಾರಿ ಬಿಡಿಸಿಕೊಳ್ಳುವ ಸಂಬಂಧ ಅವರ ವಿರುದ್ದ ಒಂದು ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**